**IV ನೇ ಹೆಚ್ಚುವರಿ ದಿವಾಣಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ**

**OS.No.1339/2014**

**DW-2**

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 19-08-2023.**

ಪಾಟೀ ಸವಾಲು ವಾದಿಪರ ವಕೀಲರು ಶ್ರೀಃ SCJ ರವರಿಂದ.

ನಾನು ಹಲಗಾ ವಾಸಿ ಎಂದು ಸುಳ್ಳು ಹೇಳುತಿದ್ದೀನಿ ಎಂದರೆ ಸರಿಯಲ್ಲ. ಕೃಷ್ಣರವರ ತಂದೆಯ ಹೆಸರು ಭೀಮನ್ನೂರ್ . ಸಾಕ್ಷಿ ಮುಂದುವರೆದ ಕೃಷ್ಣರವರ ತಂದೆಯ ಹೆಸರು ಜೋತಿಬಾ. ಭೀಮನ್ನೂರರವರಿಗೆ ಎಷ್ಟು ಜನಮಕ್ಕಳು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾಸ್ವತ್ತು ಯಾವು ಯಾವು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿ ನಮ್ಮ ಹೊಲದ ಬಾಜು ಇರುವ 142 ಆಸ್ತಿ ಗೊತ್ತು ಉಳಿದವು ಗೊತ್ತಿಲ್ಲ ಎನ್ನುತ್ತಾರೆ. ನಾನು ಏನು ಮಾಹಿತಿ ನೀಡಿರುತ್ತೇನೊ ಅದನ್ನು ಬರೆದಿರುತ್ತಾರೆ ಎನ್ನುತ್ತಾರೆ. ದಾವಾಸ್ವತ್ತಿನ ಬಾಜುದಲ್ಲಿ ನಿಮ್ಮ ಜಮೀನು ಇದೆ ಎಂದು ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬರೆಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾರು ಮಾಲಿಕರು ಇರುತ್ತಾರೋ ಅವರ ಹೆಸರು ಉತಾರದಲ್ಲಿ ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು 10 ನೇ ತರಗತಿಯವರೆಗೂ ವ್ಯಾಸಂಗ ಮಾಡಿರುತ್ತೇನೆ. ದಾವಾಸ್ವತ್ತುಗಳಲ್ಲಿ ಬಾಲಕೃಷ್ಣ, ಪೀರಾಜಿರವರು ಮಾಲೀಕರು ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅವರನ್ನು ನಾನು ನೋಡಿರುವುದಿಲ್ಲ ಕಬ್ಜದ ಬಗ್ಗೆ ಮಾತ್ರ ಹೇಳುತ್ತೇನೆ ಎನ್ನುತ್ತಾರೆ. ದಾವಾಸ್ವತ್ತುಗಳ ಚಕ್ಕ ಬಂದಿ ಹೇಳಲಾಗುವುದ ಎಂದರೆ ಸಾಕ್ಷಿ ಹಾಜು ಬಾಜು ಹೊಲ ಇರುತ್ತವೆ ನಮ್ಮ ಜಮೀನಿನ ಸರ್ವೇ ನಂಬರ್ ಹೇಳಲಾಗುತ್ತದೆ ಎನ್ನುತ್ತಾರೆ. ದಾವಾಸ್ವತ್ತು ಗಳು ಎಂದರೆ ಏನು ನನಗೆ ಗೊತ್ತಿಲ್ಲ. 2 ದಾವೆಗಳು ಇರುತ್ತದೆ ನನಗೆ ನಬಂಬರುಗಳನ್ನು ಹೇಳಲಾಗುವುದಿಲ್ಲ. ನಿಂಗಾಣಿರವರ ಹೆಂಡತಿ ಲಕ್ಷ್ಮಿ ನನಗೆ ಗೊತ್ತಿಲ್ಲ. ಅವರು ಸಹ ಒಂದು ದಾವೆಯನ್ನು ಕೃಷ್ಣರವರ ಮೇಲೆ ಹೂಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಯಾರು ಯಾರ ವಿರುದ್ಧ ಕೇಸಾಕಿರುತ್ತಾರೆ ಎಂದು ಗೊತ್ತಿದೆಯ ಎಂದರೆ ಸಾಕ್ಷಿ ಅವರದ್ದು ಅಣ್ಣತಮ್ಮಂದಿರ ಜಗಳ ಇದೆ ಅಷ್ಟೆ ಗೊತ್ತಿರುತ್ತದೆ ಎನ್ನುತ್ತಾರೆ. ನೀವು ವಾದಿಯ ತಂದೆ ಮತ್ತು ಅವರ ಪೂರ್ವಜರ ಬಗ್ಗೆ ಮತ್ತು ಕುಟುಂಬದ ಬಗ್ಗೆ ಗೊತ್ತಿದೆ

ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸಾಕ್ಷಿ ನನಗೆ ಕೃಷ್ಣರವರ ತಂದೆ ಬಗ್ಗೆ ಮಾತ್ರ ಗೊತ್ತು ಎನ್ನುತ್ತಾರೆ. ಕೃಷ್ಣರವರ ತಂದೆ ಜೋತಿಬಾರವರಿಗೆ ಎಷ್ಟು ಜನ ಅಕ್ಕ ತಂಗಿಯರು ಮತ್ತು ಅಣ್ಣತಮ್ಮಂದಿರು ಎಂದು ನನಗೆ ಗೊತ್ತಿಲ್ಲ ಈಗಲು ಸಹ ದಾವಾಸ್ವತ್ತಿನಲ್ಲಿ ಬಾಲ ಕೃಷ್ಣ, ಪಿರಾಜಿರವರು ಸ್ವಾಧೀನ ದಲ್ಲಿರುತ್ತಾರೆ ಎಂದರೆ ಸಾಕ್ಷಿ ನಾನು ಅವರನ್ನು ನೋಡಿರುವುದಿಲ್ಲ ಕೃಷ್ಣರವರು ಇರುತ್ತಾರೆ ಎನ್ನುತ್ತಾರೆ. ಕೃಷ್ಣರವರು ಸ್ವಾಧೀನದಲ್ಲಿರುತ್ತಾರೆ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ. ವಿಧಾನ ಸೌಧದ ಅಧೀವೇಶನದ ಸಮಯದಲ್ಲಿ ಅದರ ಹಾಜು ಬಾಜಿನ ಜಮೀನುಗಳನ್ನು ಬಾಡಿಗೆ ತೆಗೆದುಕೊಳ್ಳುವ ಬಗ್ಗೆ ನಿಮಗೆ ಗೊತ್ತಿದೆಯ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನೀವು ಕೃಷ್ಣರವರ ಮಾತನ್ನು ಕೇಳಿಕೊಂಡು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಜಮೀನು ದಾವಾಸ್ವತ್ತಿನ ಬಳಿ ಇದೆ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ. ನಮ್ಮದು 2 ಎಕರು ಇದೆ ಎನ್ನುತ್ತಾರೆ. ನನ್ನ ಜಮೀನಿನ ಉತಾರವನ್ನು ಹಾಜರು ಪಡಿಸುತ್ತೇನೆ. ನಿಮ್ಮದು 2 ಎಕರೆ ಜಮೀನು ಇದೆ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ. ಸರಿಯಿದೆ.

4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಾಗೂ
ಜೆ.ಎಂ.ಎಫ್.ಸಿ, ಬೆಳಗಾವಿ.